ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ದಿನಾಂಕ : **23-10-2014**

## ಪತ್ರಿಕಾ ಆಮಂತ್ರಣ

| ಕ್ರಮ ಸಂ ಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| **1.** | | | |

ನಿರ್ದೇಶಕರ ಪರವಾಗಿ

### ಪತ್ರಿಕಾ ಪ್ರಕಟಣೆ

# ಕೊಡಗು ಸೈನಿಕ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 23 (ಕರ್ನಾಟಕ ವಾರ್ತೆ)**

ಕೊಡಗು ಜಿಲ್ಲೆಯಲ್ಲಿರುವ ಸೈನಿಕ ಶಾಲೆಗೆ ರಾಷ್ಟ್ರೀಯ ರಕ್ಷಣಾ ಅಕಾಡೆಮಿ/ಭಾರತೀಯ ನೌಕಾ ಅಕಾಡೆಮಿಗೆ ಸೇರಿಸಲು 2015-16 ನೇ ಸಾಲಿನ 6 ಮತ್ತು 9 ನೇ ತರಗತಿಯ ಪ್ರವೇಶ ದಾಖಲಾತಿಗಾಗಿ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ತರಬೇತಿಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶ ಪರೀಕ್ಷೆಯು 2015 ರ ಜನವರಿ 4 ರಂದು ನಡೆಸಲಾಗುವುದು. ಅರ್ಜಿಗಳನ್ನು 2014 ರ ನವೆಂಬರ್ 29 ರವರೆಗೆ ವಿತರಿಸಲಿದ್ದು, ಡಿಸೆಂಬರ್ 6 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 08276 – 278963 ಅಥವಾ www.sainikschoolkodagu.edu.in ಸಂಪರ್ಕಿಸಬಹುದು.

**ಬಾಬು:ಜಿಪಿಆರ್.**

# <u>ಜಾಗೃತಿ ಅರಿವು ಸಪ್ತಾಹ</u>

ಬೆಂಗಳೂರು, ಅಕ್ಟೋಬರ್ 23 (ಕರ್ನಾಟಕ ವಾರ್ತೆ)

ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸಲು ಅಕ್ಟೋಬರ್ 27 ರಿಂದ ನವೆಂಬರ್ 1 ರವರೆಗೆ ರಾಜ್ಯಾದ್ಯಂತ ಜಾಗೃತಿ ಅರಿವು ಸಪ್ತಾಹವನ್ನು ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಇಲಾಖೆಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಆಚರಿಸಲು ಸರ್ಕಾರವು ಸುತ್ತೋಲೆ ಹೊರಡಿಸಿದೆ.

ಸಪ್ತಾಹದ ಆಚರಣೆಯ ಸಮಯದಲ್ಲಿ ಪ್ರಮುಖ ಸ್ಥಳಗಳಲ್ಲಿ ಭಿತ್ತಿ ಪತ್ರಗಳನ್ನು ಪ್ರದರ್ಶಿಸುವುದು, ವಿಚಾರಗೋಷ್ಠಿಯನ್ನು ಆಯೋಜಿಸುವುದು, ಭ್ರಷ್ಟಾಚಾರ ವಿರೋಧಿ ವಿಷಯಗಳ ಕುರಿತಂತೆ ಚರ್ಚಾ ಸ್ಪರ್ಧೆಗಳು, ಭಾಷಣಗಳನ್ನು ಶಾಲಾ ಕಾಲೇಜುಗಳಲ್ಲಿ ಆಯೋಜಿಸುವುದು ಮತ್ತು ಬಹುಮಾನಗಳನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಈ ಸಪ್ತಾಹ ಅವಧಿಯಲ್ಲಿ ಭ್ರಷ್ಟಾಚಾರ ವಿರೋಧದ ಲೇಖನಗಳನ್ನು ಬಿಡುಗಡೆಗೊಳಿಸುವುದು ಮತ್ತು ಈ ಜಾಗೃತಿ ಸಪ್ತಾಹದಲ್ಲಿ ಸರ್ಕಾರೇತರ ಸಂಸ್ಥೆಗಳು ಮತ್ತು ಸೇವಾ ಸಂಸ್ಥೆಗಳು ಭಾಗಹಿಸುವಂತೆ ಮತ್ತು ಈ ಸಂಬಂಧ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ.

ಅಲ್ಲದೆ, ಅಕ್ಟೋಬರ್ 27 ರಂದು ಪೂರ್ವಾಹ್ನ ಬೆಳಿಗ್ಗೆ 11-00 ಗಂಟೆಗೆ ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ಕಚೇರಿಗಳಲ್ಲಿ ಜಾಗೃತಿ ಅರಿವು ಸಪ್ತಾಹ ಕುರಿತ ಪ್ರತಿಜ್ಞಾ ವಚನ ಸ್ವೀಕರಿಸಲು ಸೂಚಿಸಲಾಗಿದೆ.

ಬಾಬು:ಜೆಪಿಆರ್.

# <u>ಪ್ರತಿಜ್ಞಾ ವಚನ ಸ್ವೀಕಾರ:</u>

ಬೆಂಗಳೂರು, ಅಕ್ಟೋಬರ್ 23 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಅಕ್ಟೋಬರ್ 27 ರಿಂದ ನವೆಂಬರ್ 1 ರವರೆಗೆ ಹಮ್ಮಿಕೊಂಡಿರುವ ಜಾಗೃತಿ ಅರಿವು ಸಪ್ತಾಹದ ಅಂಗವಾಗಿ ಕರ್ನಾಟಕ ಸಚಿವಾಲಯದಲ್ಲಿ ಅಕ್ಟೋಬರ್ 27 ರಂದು ಪೂರ್ವಾಹ್ನ 11–00 ಗಂಟೆಗೆ ಪ್ರತಿಜ್ಞಾ ವಚನವನ್ನು ತೆಗೆದುಕೊಳ್ಳುವ ಮೂಲಕ ಸಪ್ತಾಹವನ್ನು ಆಚರಿಸಲಾಗುವುದು.

ಅಂದು ಬೆಳಿಗ್ಗೆ 11–00 ಗಂಟೆಗೆ ವಿಕಾಸಸೌಧದ ಸಮ್ಮೇಳನದ ಸಭಾಂಗಣದಲ್ಲಿ (ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸಸೌಧ) ರಾಜ್ಯದ ಮುಖ್ಯಮಂತ್ರಿಯವರು ಕರ್ನಾಟಕ ಸಚಿವಾಲಯದ ಎಲ್ಲಾ ಇಲಾಖೆಗಳ ಅಧಿಕಾರಿ, ನೌಕರರಿಗೆ ಪ್ರತಿಜ್ಞಾ ವಚನವನ್ನು ಬೋಧಿಸುವರು.

ಬಾಬು:ಜೆಪಿಆರ್.